# ಬಿ.ಪಿ.ಬಿ ಸರ್ಕಾರಿ ಪ್ರೌಢಶಾಲೆ ಮಲ್ಲಂದೂರು, ಚಿಕ್ಕಮಗಳೂರು ತಾ||

**ವಿಜ್ಞಾನ** **ಎರಡನೇ ಸಂಕಲನಾತ್ಮಕ ಪರೀಕ್ಷೆ ಮಾರ್ಚ್–2014** **ಗರಿಷ್ಠ ಅಂಕಗಳು : 40**

**8ನೇ ತರಗತಿ** **ಸಮಯ:90ನಿಮಿಷಗಳು**

## I. ಈ ಕೆಳಗಿನವುಗಳಿಗೆ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ. 7X1=7

1. ಈ ಮಾಧ್ಯಮದಲ್ಲಿ ಶಬ್ದ ಪ್ರಸಾರವಾಗುವುದಿಲ್ಲ

   ಎ) ನೀರು ಬಿ) ಗಾಳಿ ಸಿ) ನಿರ್ವಾತ ಡಿ) ಗಾಜು

2. ಇವುಗಳಲ್ಲಿ ಯಾವುದು ರಾಸಾಯನಿಕ ಕ್ರಿಯೆ ?

   ಎ) ಮಂಜುಗೆಡ್ಡೆ ಕರಗುವುದು ಬಿ) ಮೇಣ ದ್ರವಿಸುವುದು

   ಸಿ) ಕಬ್ಬಿಣ ಕರಗುವುದು ಡಿ) ಕಬ್ಬಿಣ ತುಕ್ಕು ಹಿಡಿಯುವುದು

3. ಜಲಾನಿಲ ಎಂದರೆ, ಈ ಅನಿಲಗಳ ಮಿಶ್ರಣ

   ಎ) $CO + H_2$ ಬಿ) $CO_2 + SO_2$ ಸಿ) $CO_2 + H_2$ ಡಿ) $CO + N_2$

4. ಪ್ರಾಣಿ ಪ್ರಪಂಚದಲ್ಲಿ ಅತ್ಯಂತ ನಿಧಾನಗತಿಯಲ್ಲಿ ಪ್ರಜನನ ಮಾಡುವ ಪ್ರಾಣಿ

   ಎ) ಸಿಂಹ ಬಿ) ಆನೆ ಸಿ) ಜಿರಾಫೆ ಡಿ) ಕುದುರೆ

5. ತರಗತಿಯಲ್ಲಿ ಶಿಕ್ಷಕರೊಬ್ಬರು ಕಪ್ಪೆಯನ್ನು ಕೊಯ್ದು ಮಕ್ಕಳಿಗೆ ಅದರ ಅಂಗರಚನೆಯನ್ನು ವಿವರಿಸಬೇಕಾಗಿದೆ. ಮೊದಲ ಹೆಜ್ಜೆ , ಕಪ್ಪೆಯ ಅರವಳಿಕೆಗಾಗಿ ಅವರು ಬಳಸಬಹುದಾದದ್ದು ___________

   ಎ) ಕ್ಲೋರೋಫಾರಂ ಬಿ) ಸಾಬೂನು ಸಿ) D.D.T ಡಿ) ಕ್ಲೋರೋ ಫ್ಲೋರೊ ಕಾರ್ಬನ್

6. ಭೂಮಿಗೆ ಅತಿ ಸಮೀಪವಾದ ನಕ್ಷತ್ರ

   ಎ) ಸಿರಿಯಸ್ ಬಿ) ಸೂರ್ಯ ಸಿ) ರೀಗೆಲ್ ಡಿ) ಬೀಟಲ್ ಗೀಸ್

7. ಒಂದು ಮುದ್ರಿತ ಪ್ರತಿಯ ಯಥಾವತ್ ನಕಲನ್ನು ಇತರ ಸ್ಥಳಗಳಿಗೆ ಶೀಘ್ರವಾಗಿ ರವಾನೆ ಮಾಡಬಹುದಾದ ಸಾಧನ

   ಎ) ದೂರದರ್ಶನ ಬಿ) ಮೊಬೈಲ್ ಸಿ) ಫ್ಯಾಕ್ಸ್ ಡಿ) ಧ್ವನಿವರ್ಧಕ

## II. ಬಿಟ್ಟ ಸ್ಥಳವನ್ನು ಸೂಕ್ತ ಉತ್ತರಗಳಿಂದ ತುಂಬಿರಿ. 3X1=3

8. ಹಾಲಿನ ಶುದ್ಧತೆಯನ್ನು ಅಳೆಯುವ ಸಾಧನ ___________

9. $2Al + 3Cl_2 \longrightarrow$ ____________

10. ಆವೃತ್ತ ಬೀಜ ಸಸ್ಯಗಳಲ್ಲಿ ಸಂತಾನೋತ್ಪತ್ತಿಯ ಅಂಗ ________

## III. 11. ಹೊಂದಿಸಿ ಬರೆಯಿರಿ. 1X4=4

| ಎ | ಬಿ |
|---|---|
| 1. ವಿಟಮಿನ್ ಕೆ | ಎ. ಆಕ್ಸಿಜನ್ ಸರಬರಾಜು |
| 2. ವಿಟಮಿನ್ ಸಿ | ಬಿ. ಕೆಂಪು ರಕ್ತ ಕಣಗಳ ಉತ್ಪತ್ತಿ |
| 3. ಹಿಮೋಗ್ಲೋಬಿನ್ | ಸಿ. ಕಣ್ಣಿನ ಕಾರ್ಯಕ್ಷಮತೆ ಕಾಪಾಡಲು |
| 4. ಕ್ಯಾಲ್ಸಿಯಂ | ಡಿ. ರಕ್ತ ಹೆಪ್ಪುಗಟ್ಟುವ ಕ್ರಿಯೆ |
| | ಇ. ಮೂಳೆ ಹಾಗೂ ಹಲ್ಲುಗಳ ಬೆಳವಣಿಗೆ |
| | ಎಫ್. ಆಂತರಿಕ ರಕ್ತಸ್ರಾವ ತಡೆಯಲು |

## IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯಗಳಲ್ಲಿ ಉತ್ತರಿಸಿ. 4X1=4

12. ಪರಕೀಯ ಪರಾಗಸ್ಪರ್ಶ ಎಂದರೇನು ?
13. ಚಲನಶಕ್ತಿಯಿಂದ ಉಷ್ಣ ಉತ್ಪತ್ತಿಯಾಗುತ್ತದೆ ಎಂಬುದಕ್ಕೆ ಒಂದು ದೃಷ್ಟಾಂತ ಕೊಡಿ.
14. ಕಬ್ಬಿಣದ ಮೊಳೆಯು ನೀರಿನಲ್ಲಿ ಮುಳುಗುತ್ತದೆ ಆದರೆ ಪಾದರಸದ ಮೇಲೆ ತೇಲುತ್ತದೆ. ಏಕೆ ?
15. ಸಲ್ಫರ್ ಡೈಆಕ್ಸೈಡ್‌ನ ಎರಡು ಉಪಯೋಗಗಳನ್ನು ತಿಳಿಸಿ.

## V. ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ. 6X2=12

16. ಈ ಕೆಳಗಿನವುಗಳ ಕಾರ್ಯ ತಿಳಿಸಿ.
    ಅ) ಮೈಕ್ರೋಫೋನ್ ಆ) ಮಿಶ್ರಕ
17. ಉಷ್ಣ ಮತ್ತು ತಾಪಗಳಿಗಿರುವ ಎರಡು ವ್ಯತ್ಯಾಸಗಳನ್ನು ತಿಳಿಸಿ.
18. ಒಂದು ತರಂಗವನ್ನು ನಕ್ಷೆ ಮೂಲಕ ಪ್ರತಿನಿಧಿಸಿ ಮತ್ತು ತರಂಗದೂರ, ಕಂಪನ ವಿಸ್ತಾರ ಇವುಗಳನ್ನು ಗುರುತಿಸಿ.
19. ಸೂಕ್ತ ಉದಾಹರಣೆಗಳೊಂದಿಗೆ ಲಾಮಾರ್ಕ್ ಸೂಚಿಸಿದ ಅಂಗಗಳ ಅತಿ ಬಳಕೆ ಮತ್ತು ದುರ್ಬಳಕೆ ಸಿದ್ಧಾಂತವನ್ನು ವಿವರಿಸಿ.
20. ಈ ಕೆಳಗಿನವುಗಳಿಗೆ ವೈಜ್ಞಾನಿಕ ಕಾರಣ ಕೊಡಿ.
    ಅ) ಸೂರ್ಯನ ಹತ್ತಿರ ಬಂದಾಗ ಧೂಮಕೇತುಗಳಿಗೆ ಬಾಲ ಬೆಳೆಯುತ್ತದೆ.
    ಆ) ಶುಕ್ರ ಗ್ರಹದಲ್ಲಿ ಹಸಿರು ಮನೆ ಪರಿಣಾಮದ ಪ್ರಾಮುಖ್ಯತೆ ಹೆಚ್ಚು.
21. ಈ ಕೆಳಗಿನ ಸಂದರ್ಭಗಳಲ್ಲಿ ಜರುಗುವ ರಾಸಾಯನಿಕ ಕ್ರಿಯೆಗಳನ್ನು ಸಮೀಕರಣಗಳ ಮೂಲಕ ತಿಳಿಸಿ.
    ಅ) ಸೋಡಿಯಂ ನೀರಿನೊಂದಿಗೆ ವರ್ತಿಸಿದಾಗ
    ಆ) ಕಾರ್ಬನ್ ಡೈ ಆಕ್ಸೈಡ್ ನೀರಿನಲ್ಲಿ ವಿಲೀನವಾದಾಗ

## VI. ಈ ಕೆಳಗಿನ ಪ್ರಶ್ನೆಗಳಿಗೆ 4–5 ವಾಕ್ಯಗಳಲ್ಲಿ ಉತ್ತರಿಸಿ. 2X3=6

22. ಅ) ಬಿಳಿಯ ಬೆಳಕು ವಿವಿಧ ಬಣ್ಣಗಳಿಂದ ಕೂಡಿದೆ ಎಂದು ಹೇಗೆ ಹೇಳುವಿರಿ ?
    ಆ) ನೀರಿನಲ್ಲಿ ಪಾರ್ಶ್ವವಾಗಿ ಮುಳುಗಿಸಿದ ಸ್ಕೇಲ್ ಬಾಗಿದಂತೆ ಕಾಣುವುದು. ಏಕೆ ?
23. ಅ) ಮಣ್ಣಿನ ಫಲವತ್ತತೆಯನ್ನು ಕಾಪಾಡುವಲ್ಲಿ ಅನುಸರಿಸಬಹುದಾದ ವ್ಯವಸಾಯ ಪದ್ಧತಿಗಳನ್ನು ತಿಳಿಸಿ.
    ಆ)ಕೃಷಿ ಚಟುವಟಿಕೆಗಳಿಗೆ ರಸಗೊಬ್ಬರಗಳ ಬಳಕೆಗಿಂತ ಸಾವಯವ ಗೊಬ್ಬರದ ಬಳಕೆ ಹೆಚ್ಚು ಸೂಕ್ತ. ಏಕೆ ?

## VII. ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ. 1X4=4

24. ಮಾನವನ ಜೀರ್ಣಾಂಗವ್ಯೂಹದ ಅಂದವಾದ ಚಿತ್ರ ಬರೆದು ಈ ಕೆಳಕಂಡ ಭಾಗಗಳನ್ನು ಗುರುತಿಸಿ.
    ಅ) ಅನ್ನನಾಳ ಆ) ಸಣ್ಣ ಕರುಳು ಇ) ಪಿತ್ತಜನಕಾಂಗ ಈ) ಮೇದೋಜೀರಕಾಂಗ

*********************************************